

# ಬಗೆ ಬಗೆಯ ಪಾತ್ರಗಳಲ್ಲಿ ನಟಿಸಬೇಕು

**ಸುನಿಲ್**

**ಉದಯದ 'ಸರಯೂ'ದ ಪವನ್**

★ *ನಟನಾಗಲು ಪ್ರೇರಣೆ ಏನು?*

ನನ್ನ ಬೆನ್ನ ಹಿಂದೆ ಬೆಂಬಲಿಸಲೂ ಯಾರೂ ಇರಲಿಲ್ಲ. ಓದಿದ್ದು ಕೂಡ ಅಷ್ಟಕ್ಕಷ್ಟೆ. ಎಸ್ಸೆಸ್ಸೆಲ್ಸಿ ಓದಿದ ತಕ್ಷಣ ದುಡಿಯುವ ಅನಿವಾರ್ಯತೆ ಬಂತು. ಕೆಲಸ ಹುಡಿಕೊಂಡು ಬೆಂಗಳೂರಿಗೆ ಬಂದೆ. ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿದ್ದೆ. ನನಗೆ ಸಿನಿಮಾ ನೋಡುವ ಗೀಳು ಸ್ವಲ್ಪ ಹೆಚ್ಚಿತ್ತು. ಬಿಡುವಿನ ಸಮಯ ಸಿನಿಮಾಕ್ಕೆ ಮೀಸಲಾಗಿರುತ್ತಿತ್ತು. ಒಮ್ಮೆ ನನ್ನಲ್ಲೇ ಒಂದು ಚಿಂತನೆ ಬಂತು. ಏನಾದರೂ ಮಾಡಬೇಕು. ವ್ಯಾವಹಾರಿಕತೆ ಇಲ್ಲ, ವೃತ್ತಿ ಕೌಶಲ್ಯ– ವೃತ್ತಿ ಸಂಬಂಧಿ ಶಿಕ್ಷಣವೂ ಇಲ್ಲ. ಇದೇ ಕೆಲಸ ಎಷ್ಟು ದಿನ ಮಾಡುವುದು? ಎನ್ನುವ ಪ್ರಶ್ನೆ ಕಾಡಿತು. ನಟನಾದರೂ ಆಗಬಹುದು ಎನ್ನುವ ಆಶೆ ಬಂತು. ಟಿವಿ ಆಡಿಷನ್‌ಗಳಿಗೆ ಹೊರಟೆ. ಅದಕ್ಕಾಗಿ ಏನಾದರೂ ಕಲಿಯಬೇಕು ಎನ್ನಿಸಿತು. ರಂಗಭೂಮಿಯನ್ನು ಆಯ್ಕೆ ಮಾಡಿಕೊಂಡೆ. ವಿವಿಧ ರಂಗ ತಂಡಗಳಲ್ಲಿ ಎರಡು ಮೂರು ವರ್ಷ ಪಳಗಿದೆ. ಹೀಗಿದ್ದವನಿಗೆ ಸಣ್ಣಪುಟ್ಟ ಪಾತ್ರಗಳಲ್ಲಿ ಅವಕಾಶ ಸಿಗುತ್ತಿದ್ದವು. ಬಾಲಸುಬ್ರಹ್ಮಣ್ಯಂ ಕಸ್ತೂರಿಗೆ 'ಯಾರದು?' ಮಾಡುತ್ತಿದ್ದರು. ಅದರಲ್ಲಿ ನನಗೆ ಹೇಳಬಹುದಾದ ಮೊದಲ ಅವಕಾಶ ಮತ್ತು ಸಂಭಾವನೆ ಎರಡೂ ಸಿಕ್ಕಿತು.

ಆದರೆ ನಾನೊಬ್ಬ ನಟ ಎಂದು ಸಾರ್ವಜನಿಕವಾಗಿ ಗುರುತಿಸಲು ಸಾಧ್ಯವಾಗಿದ್ದು 'ಅಶ್ವಿನಿ ನಕ್ಷತ್ರ'ದಿಂದ. ಅಂದರೆ ನಟನೊಬ್ಬನ ಬೆಳವಣಿಗೆಗೆ ಕಥೆ– ಪಾತ್ರ ಎರಡೂ ಮುಖ್ಯವಾಗುತ್ತವೆ. 'ಅಶ್ವನಿ ನಕ್ಷತ್ರ'ದ ನಂತರ ಪ್ರಮುಖ ಪಾತ್ರಗಳು ನನ್ನ ಪಾಲಿಗೆ ಸಿಗಲು ಆರಂಭಿಸಿದವು. 2009ರಿಂದ ನಟಿಸುತ್ತಿದ್ದರೂ ನಾನೂ ಒಬ್ಬ ನಟ ಎನ್ನುವ ಮಾನ್ಯತೆ ಸಿಗಲು ಇಷ್ಟೊಂದು ದೀರ್ಘಕಾಲ ತೆಗೆದುಕೊಳ್ಳಬೇಕಾಯಿತು.

★ *ನಿಮ್ಮ ಯಾನವನ್ನು ಒಮ್ಮೆ ನೆನಪಿಸಿಕೊಂಡರೆ...*

ಮಂಗಳೂರಿನಿಂದ ಕೊಡಗಿನ ಸೋಮವಾರಪೇಟೆಯಲ್ಲಿ ನಮ್ಮ ಕುಟುಂಬ ನೆಲೆಗೊಂಡಿದೆ. ಓದನ್ನು ಮುಂದುವರಿಸಲಾಗದ ಸ್ಥಿತಿಯಲ್ಲಿ ದುಡಿಮೆಯನ್ನು ನಂಬಿ ನಗರಕ್ಕೆ ಬಂದೆ. ನಟನೆಯ ಆಶೆ ಮೊಳಕೆಯೊಡೆಯಿತು. ಶುರುವಿನಲ್ಲಿ ಅದಕ್ಕಾಗಿ ಸಿಕ್ಕಾಪಟ್ಟೆ ಶ್ರಮಿಸಿದ್ದೇನೆ. ಯಾವತ್ತೋ ಒಂದು ಕಂತಿನ ಪುಟ್ಟ ಪಾತ್ರಕ್ಕೆ ಕಾದು ಕುಳಿತು ನಟಿಸಿದ್ದೇನೆ. 500 ರೂಪಾಯಿ ಸಂಭಾವನೆಯನ್ನೂ ಪಡೆಯಲು ಹೆಣಾಗಾಡಿದ್ದೂ ಇದೆ. 'ಮಹಾಭಾರತ'ದಲ್ಲಿ ನಟಿಸಿದ್ದೆ. 'ಸುಮಂಗಲಿ'ಯಲ್ಲಿ ನಾಯಕನ ಪಾತ್ರವನ್ನೇ ನಿರ್ವಹಿಸಿದ್ದೆ. ಆದರೆ ನಾನು ಏನೂ ಅಲ್ಲ ಎನ್ನುವ ಕೊರಗು ನನ್ನನ್ನೇ ಕಾಡುತ್ತಿತ್ತು. ಪಾತ್ರಕ್ಕೆ ನಾಯಕನೇ ಆಗಬೇಕಿಲ್ಲ. ವಿಲನ್ನೇ ಆಗಬೇಕಿಲ್ಲ. ಅಭಿನಯಕ್ಕೆ ಅವಕಾಶ ಇರಬೇಕು. ಕಥೆಯಲ್ಲಿ ಅದಕ್ಕೊಂದು ಮಹತ್ವ ಇದ್ದರೆ ಅದರ ಚಿತ್ರಣವೇ ಬೇರೆ ಆಗುತ್ತದೆ ಎನ್ನುವುದು ಅರಿವಾಗುತ್ತಾ ಬಂತು. ಆನಂತರ ಪಾತ್ರ ಯಾವುದಾದರೇನು ಅದರ ಅಗತ್ಯ ಕಥೆಗೆ ಎಷ್ಟಿದೆ ಎನ್ನುವುದನ್ನು ಕಲಿತೆ.

★ *ಎಂತಹ ಪಾತ್ರ ನಿಮಗಿಷ್ಟ?*

ನಟನೆಗೆ ಅವಕಾಶ ಇರಲೇ ಬೇಕು. ಪಾತ್ರ ಏಕತಾನತೆ ಅನ್ನಿಸಬಾರದು. ಅಂದರೆ, ಕಾಮಿಡಿ ಪಾತ್ರ ಮಾಡಿದರೆ ಅಂತಹದ್ದೇ ಪಾತ್ರಗಳು, ಒಮ್ಮೆ ಪೊಲೀಸ್ ಅಧಿಕಾರಿ ಪಾತ್ರ ಸಿಕ್ಕರೆ ಅಂತಹದ್ದೇ ಅವಕಾಶ ಸಿಗುತ್ತಿರುತ್ತವೆ. ಆರೀತಿ ಬೆಳವಣಿಗೆ ವೈಯಕ್ತಿಕವಾಗಿ ನನಗೆ ಇಷ್ಟ ಆಗುವುದಿಲ್ಲ. ಏಕೆಂದರೆ ಪರಿಪೂರ್ಣ ನಟನಾಗಬೇಕು ಅಂದರೆ ಪಾತ್ರದಲ್ಲಿ ವೈವಿಧ್ಯ ಇರಬೇಕು.ಜನರು ಗುರುತಿಸುವಂತೆ ಕಥೆಯಲ್ಲಿ ಆ ಪಾತ್ರವನ್ನು ಪೋಷಣೆ ಮಾಡಿದರೆ ಸಾಕು. ಇದನ್ನು ಬಿಟ್ಟು ಹೆಚ್ಚಿನದೇನೂ ಇಲ್ಲ. ನಾನು ಹಾಸ್ಯ ಮಾಡುತ್ತೇನೆ ಎನ್ನುವುದು ನನಗೇ ಗೊತ್ತಿರಲಿಲ್ಲ. ನಿಜಕ್ಕೂ ನನಗೆ ಅದು ಅಚ್ಚರಿಯನ್ನು ಮೂಡಿಸಿತು. ಆ ವಿಶ್ವಾಸವೂ ಅವಕಾಶದಿಂದಲೇ ಸಾಧ್ಯವಾಗಿದ್ದು. ವೈಯಕ್ತಿಕವಾಗಿ ನನಗೆ ವಿಲನ್ ಛಾಯೆ ಇರುವ ಪಾತ್ರವೇ ಇಷ್ಟ. ಆದರೆ ಅದೇ ಪುನರಾವರ್ತನೆ ಆಗಬಾರದು ಅಷ್ಟೆ.

★ *ಮುಂದಿನ ಯೋಜನೆಗಳು ಏನು?*

ನಟನಾಗಿಯೇ ಮುಂದುವರಿಯುತ್ತೇನೆ. ಸದ್ಯ ತುಳುವಿನಲ್ಲಿ 'ಚಾಪ್ಟರ್'ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಕನ್ನಡದಲ್ಲಿ 'ಆ ದಿನಗಳು' ನಾಯಕ ನಟ ಚೇತನ್ ಜೊತೆ ಒಂದು ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಅದಕ್ಕೆ ಇನ್ನೂ ಹೆಸರು ಇಟ್ಟಿಲ್ಲ. ಅದರಲ್ಲಿ ನಾಯಕನ ತಮ್ಮನ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ.

ಸದ್ಯ ಪ್ರೀತಿ ಪ್ರೇಮಗಳ ಗುಂಗು ತಲೆಯನ್ನು ಹೊಕ್ಕಿಲ್ಲ. ಖುಷಿಯಿಂದ ಜೀವನವನ್ನು ಅನುಭವಿಸುತ್ತಿದ್ದೇನೆ. ಸಂಪೂರ್ಣ ನನ್ನ ಗಮನ ನಟನೆಗೆ ಕೊಟ್ಟಿದ್ದೇನೆ.

■ ರಾಗು